ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದಾಗ್ಯೂ ಸಹ ಯಾವುದೇ ತರಹದ ಕ್ರಮ ಕೈಗೊಳ್ಳಲಾಗಿಲ್ಲ. ಗ್ರಾಮಂದ ಹರಿಜನರ ಬಗ್ಗೆ ಸತತವಾಗಿ ನಡೆಯುತ್ತಿರುವ ದಬ್ಬಾಳಿಕೆಯ ವಿರುದ್ಧ ಮತ್ತು ಅವರಿಗೆ ರಕ್ಷಣೆ ಕೊಡುವಲ್ಲಿ ವಿಫಲತೆಯನ್ನು ಸರ್ಕಾರದ ಗಮನಕ್ಕೆ ತರುವುದರೊಂದಿಗೆ ಈ ಬಗ್ಗೆ ತಕ್ಷಣ ಕಾರ್ಯಾಚರಣೆ ನಿರೀಕ್ಷಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಈಗ ಗೃಹ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಆದ್ದರಿಂದ ಮುಂದಿನ ದಿನ ಸಭೆ ಸೇರಿದಾಗ ಉತ್ತರ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

೮) ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಬಡ್ತಿ ಕೊಡುವ ಬಗ್ಗೆ.

ಶ್ರೀ ಎನ್. ಹೆಚ್. ಗೌಡ.—ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಪದವೀಧರ ಶಿಕ್ಷಕರ ಪರಿಸ್ಥಿತಿ ಶೋಚನೀಯವಾಗಿದೆ. ಕಳೆದ ೮-೧೦ ವರ್ಷಗಳಿಂದ ಶಾಸಕರಲ್ಲಿ, ಸಚಿವರಲ್ಲಿ ಮತ್ತು ಇಲಾಖೆಯ ಮುಖ್ಯಸ್ಥರಲ್ಲೇ ಅನೇಕ ಸಲ ನಿವೇದಿಸಿಕೊಂಡರೂ ಅವರ ಬೇಡಿಕೆ ಕಾನನ ರೋಧನವಾಗಿಯೇ ಉಳಿದಿದೆ. ಅವರು ಮುಖ್ಯ ತಮ್ಮ ಎರಡು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ.

೧. ಬಡ್ತಿ ಪ್ರಮಾಣವನ್ನು ಏರಿಸುವುದು.—ಹಿಂದೆ ರಾಜ್ಯದಲ್ಲಿ ಪ್ರೌಢಶಾಲೆಗಳ ಸಂಖ್ಯೆ ಬಹಳ ಕಡಿಮೆ ಇದ್ದಾಗ ಪದವೀಧರ ಶಿಕ್ಷಕರ ಬಡ್ತಿ ಪ್ರಮಾಣ ಶೇ. ೨೦ರಷ್ಟಿರಬೇಕು ಎಂದು ನಿಗದಿಪಡಿಸಲಾಗಿತ್ತು, ಆದರೆ ಈಗ ರಾಜ್ಯದಲ್ಲೇ ಪ್ರೌಢಶಾಲೆಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿರುವುದರಿಂದ ಪದವೀಧರ ಪ್ರಾಥಮಿಕ ಶಿಕ್ಷಕರ ಬಡ್ತಿ ಪ್ರಮಾಣವನ್ನು ಶೇ. ೫೦ರಷ್ಟಕ್ಕಾದರೂ ಏರಿಸಬೇಕಾದ್ದು ಅನಿವಾರ್ಯವಾಗಿದೆ,

೨. ಬಿ. ಎಡ್. ತರಬೇತಿಗೆ ಅವಕಾಶ ಕಲ್ಪಿಸಿಕೊಡುವುದು.—ಕಳೆದ ಮೂರು ವರ್ಷಗಳ ಹಿಂದೆ ಸರ್ಕಾರ ಹೊರಡಿಸಿದ ಆಜ್ಞೆಯ ಪ್ರಕಾರ ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಪದವೀಧರ ಶಿಕ್ಷಕರು ಬಿ ಎಡ್. ತರಬೇತಿಯನ್ನು ಪಡೆದರೆ ಮಾತ್ರ ಬಡ್ತಿಯನ್ನು ನೀಡಬೇಕೆಂದು ಕಡ್ಡಾಯಗೊಳಿಸಲಾಗಿದೆ. ಎ.ಎಡ್. ತರಬೇತಿಯನ್ನು ಪಡೆಯಲು ಪ್ರಾಥಮಿಕ ಪದವೀಧರ ಶಿಕ್ಷಕರಿಗೆ ರಾಜ್ಯದಲ್ಲಿ ಯಾವ ಅನುಕೂಲತೆಯೂ ಇಲ್ಲವಾಗಿದೆ. ಆದ್ದರಿಂದ ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಈ ಹಿಂದೆ ಇದ್ದಂತೆ ಅಂಚೆ ತೆರಪಿನ ಬಿ.ಎಡ್. ತರಬೇತಿಯನ್ನು ನೀಡಲು ವ್ಯವಸ್ಥೆ ಆಗಬೇಕಾಗಿವೆ.

ಪ್ರಾಥಮಿಕ ಪದವೀಧರ ಶಿಕ್ಷಕರ ಮೇಲಿನ ಎರಡು ಜ್ವಲಂತ ಸಮಸ್ಯೆಗಳತ್ತ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಮಾನ್ಯ ಸದಸ್ಯರು ಪ್ರಾಥಮಿಕ ಶಾಲಾ ಉಪಾಧ್ಯಾಯರ ಅತಿ ಮಹತ್ವವಾದ ಬೇಡಿಕೆಗಳ ಬಗ್ಗೆ ಬಹಳ ವಿವರವಾದ ವಿಚಾರಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಈ ವಿಚಾರವನ್ನು ಶಿಕ್ಷಣ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಉತ್ತರವನ್ನು ಮುಂದಿನ ಸಭೆಯಲ್ಲಿ ಕೊಡಲಿಕ್ಕೆ ಹೇಳುತ್ತೇನೆ.

೯) ಬೆಂಗಳೂರು ನಗರದಲ್ಲಿ ಮಕ್ಕಳ ಅಪಹರಣವಾಗುತ್ತಿರುವ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರು ನಗರದಲ್ಲಿ ಮಕ್ಕಳ ಅಪಹರಣದ ಬಗ್ಗೆ ಅನೇಕ ದೂರುಗಳೂ, ಊಹಾಪೋಹಗಳೂ ಹಬ್ಬಿವೆ. ಕೆಲವು ನಿದರ್ಶನಗಳು ಇದಕ್ಕೆ ಪುರಾವೆ ಸಿಕ್ಕಿವೆ.

೨೧-೮-೧೯೮೫ರ ಬೆಳಿಗ್ಗೆ ೧೦ಕ್ಕೆ, ೧೦ ವರ್ಷದ ಕುಮಾರಿ ಶಬನಾ ಫಾತಿಮಾ ಎಂಬ ಯಶವಂತಪುರದಲ್ಲಿ ವಾಸಿಸುವ ಹುಡುಗಿಯು ತನ್ನ ಶಾಲೆಗೆ (ಮಹಮ್ಮದ್ ಶರೀಫ್ ಶಾಲೆ) ಹೋಗುತ್ತಿದ್ದಳು. ಅವಳ ಅಕ್ಕ ರಜಿಯಾಸುಲ್ತಾನ ಕೂಡ ಇದ್ದಳು. ಅವಳ ತಾಯಿ ಶ್ರೀಮತಿ ಜಹರುನ್ನಿಸ್ಸಾಬಿಯವರು ಪಕ್ಕದ ಜಿಲ್ಲಾ ಅಭಿವೃದ್ಧಿ ಮಂಡಳಿಯ ಕಟ್ಟಡದ ಬಳಿ ಹೋಗುದ್ದಾಗ ಕೆಲವು ಆಗುಂತಕರು ಕಾರಿನಲ್ಲಿ ಬಂದು ಈ ಹುಡುಗಿಯನ್ನು (ಶಬನಾಫಾತಿಮಾ) ಅಪಹರಿಸಿಕೊಂಡು ಹೋಗಲು ಕಾರಿನಲ್ಲಿ

ದಬ್ಬಿದರು. ಅಷ್ಟರಲ್ಲಿ ಹತ್ತಿರದಲ್ಲೇ ಇದ್ದ ವ್ಯಾಪಾರಸ್ಥನೊಬ್ಬ ಓಡಿಬಂದು ಕೂಗಿಕೊಂಡಿದ್ದರಿಂದ ಈ ಹುಡುಗಿಯನ್ನು ಕಾರಿನಿಂದ ಹೊರಗಡೆಗೆ ದಬ್ಬಿ ಹೊರಟು ಹೋದರೆಂದು ತಿಳಿದು ಬಂದಿದೆ. ಈ ಹುಡುಗಿ ಮಧ್ಯಾಹ್ನ ಯಶವಂತಪುರದ ಪೋಲೀಸ್ ಠಾಣೆಗೆ ದೂರು ಕೊಡಲು ಹೋದಾಗ ದೂರನ್ನು ರಿಜಿಸ್ಟರ್ ಮಾಡಲು ಪೋಲೀಸ್ ಅಧಿಕಾರಿಗಳು ನಿರಾಕರಿಸಿದರೆಂದು ಗೊತ್ತಾಗಿದೆ. ಅಲ್ಲದೆ ಆ ಹುಡುಗಿಯನ್ನು ಹೊಡೆದರೆಂದೂ, ಸುಳ್ಳು ಹೇಳುತ್ತಿದ್ದೀಯ ಎಂದು ಬೆದರಿಸಿ ಕಳುಹಿಸಿದ್ದಾರೆ. ಶಬನಾ ಫಾತಿಮಾನನ್ನು ಕೇಳಲಾಗಿ ಕಾರಿನಲ್ಲಿ ಇನ್ನೂ ಇಬ್ಬರು ಮಕ್ಕಳಿದ್ದರೆಂದೂ ಅವರ ಬಾಯಿಯನ್ನು ಕಟ್ಟಲಾಗಿತ್ತೆಂದೂ ಹೇಳಿದ್ದಾಳೆ.

ಇನ್ನೊಂದು ಇದೇ ರೀತಿಯ ದೂರು ಮಲ್ಲೇಶ್ವರದ ಪ್ಲಾಟ್‌ಫಾರಂ ರಸ್ತೆಯಲ್ಲಿರುವ ಚಕ್ಕರಾಯನ ಕೆರೆಯ ಅಂಗಳದಲ್ಲಿನ ನಿವಾಸಿಗಳಿಂದ ಬಂದಿದೆ. ಇಬ್ಬರು ಮಕ್ಕಳನ್ನು ನಿನ್ನೆ ಸಂಜೆ ಅಪಹರಣ ಮಾಡಿರುವುದಾಗಿಯೂ ಅದರ ಬಗ್ಗೆ ಯಾರೂ ಕೇಳದಂತಾಗಿದೆಯೆಂದು ಅಲ್ಲಿನ ಬಡಜನತೆ ಗೋಳಿಡುತ್ತಿದ್ದಾರೆ.

ಮಲ್ಲೇಶ್ವರ, ರಾಜಾಜಿನಗರ ಮತ್ತಿತರ ಕಡೆಗಳಲ್ಲಿ ಇದರಿಂದ ಜನ ದಿಗ್ಭ್ರಾಂತರಾಗಿದ್ದಾರೆ, ಹೆದರಿದ್ದಾರೆ.

ಆದ್ದರಿಂದಲೇ ಈ ಎರಡು ವಿಷಯಗಳ ಬಗ್ಗೆ ಗೃಹ ಸಚಿವರು ಹೇಳಿಕೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

೧) ಯಶವಂತಪುರದ ಘಟನೆಯ ಬಗ್ಗೆ ವಿವರ ಮತ್ತು ಕೈಗೊಂಡ ಕ್ರಮ.

೨) ಮಕ್ಕಳು ಅಪಹರಣವಾಗುತ್ತಿದ್ದಾರೆಂಬ ಬಲವಾದ ವದಂತಿ ಮತ್ತು ಸರ್ಕಾರದ ಪೋಲೀಸ್ ಇಲಾಖೆಯ ನಿಷ್ಕ್ರಿಯೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು) —ಈ ವಿಚಾರವನ್ನು ಗೃಹ ಸಚಿವರ ಗಮನಕ್ಕೆ ತಂದು ಮುಂದಿನ ಸಭೆಯಲ್ಲಿ ಉತ್ತರ ಕೊಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಮಂಡ್ಯ ಪ್ರಥಮ ಸರ್ಕಲ್ ವಾಣಿಜ್ಯ ಅಧಿಕಾರಿ ಶ್ರೀ ವೆಂಕಟೇಶ್ ಎಂಬುವರು ಒಂದು ಸಾವಿರ ರೂಪಾಯಿಗಳ ಲಂಚ ಪಡೆಯುತ್ತಿದಾಗ ಲಂಚ ನಿರೋಧ ಅಧಿಕಾರಿಗಳಿಂದ ಹಿಡಿಯಲ್ಪಟ್ಟಿದ್ದರೂ ಈವರೆಗೆ ಸದರಿ ಅಧಿಕಾರಿಯನ್ನು ಅಮಾನತ್ತುಗೊಳಿಸಿಲ್ಲ ಹಾಗೂ ಆ ಅಧಿಕಾರಿಯ ಮೇಲೆ ಯಾವ ಕ್ರಮ ವನ್ನೂ ಕೈಗೊಂಡಿಲ್ಲ. ಈ ಅಧಿಕಾರಿಗೆ ಪ್ರಭಾವ ರಾಜಕಾರಣಿಗಳ ಮತ್ತು ಅಧಿಕಾರಿಗಳ ಕೈವಾಡ ಇದೆಎಂದು ತೋರುತ್ತದೆ. ನಾನು ಈ ಬಗ್ಗೆ ೧–೮–೮೫ ರಂದು ಒಂದು ಚುಕ್ಕೆ ಗುರುತಿನ ಪ್ರಶ್ನೆ ಕಳುಹಿಸಿ ದ್ದರೂ ಸಹ ೧೪–೮–೮೫ರ ನಂತರ ಕಳುಹಿಸಲಾದ ಪ್ರಶ್ನೆಗಳನ್ನು ಪರಿಣಿಸಲಾಗುವುದಿಲ್ಲ ಎಂದು ಉತ್ತರ ಬಂದಿದೆ. ಇದನ್ನು ನೋಡಿದರೆ ಇದೂ ಸಹ ರಾಜಕಾರಣದ ಕೈವಾಡ ತೋರುತ್ತದೆ. ಇಂತಹ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ಸದನದ ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು.—ಇಲ್ಲಿ ರಾಜಕಾರಣ ಯಾರೂ ಮಾಡುವುದಿಲ್ಲ. ಕೆಲವು ಪ್ರಶ್ನೆಗಳನ್ನು ರಿಜೆಕ್ಟ್ ಮಾಡುವುದಕ್ಕೆ ಪ್ರಾವಿಷನ್ ಇರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಮೇಲಲ್ಲ ಅವರು ಹೇಳಿದ್ದು.

ಅಧ್ಯಕ್ಷರು.—'ದುಷ್ಟ ಶಿಕ್ಷಕಂ, ಶಿಷ್ಟ ರಕ್ಷಕಂ' ಎಂಬುದು ನಮ್ಮ ತತ್ವ. ಸಾವಿರಾರು ಸೂಚನೆಗಳು ಪ್ರಶ್ನೆಗಳು ಬರುತ್ತವೆ ತಮ್ಮದೇನಾದರೂ ಇದ್ದರೆ ಕನ್‌ವಿನ್ಸ್ ಮಾಡಬೇಕು. ರಾಜಕಾರಣ ಸರ್ಕಾರದಲ್ಲಿ ಯಾರೂ ಮಾಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಮೇಲಂತೂ ಆ ಪ್ರಶ್ನೆ ಬರುವುದಿಲ್ಲ.

ಅಧ್ಯಕ್ಷರು.—ಕ್ರಿಮಿನಲ್ ವಿಚಾರಣೆ ಮಾಡುವುದಿದ್ದರೆ ಸಸ್ಪೆಂಡ್ ಮಾಡುತ್ತಾರೆ. ಹೇ ವಕೀಲರೆ.

ಒಬ್ಬ ಮಾನ್ಯ ಸದಸ್ಯರು—ಅವರು ವಕೀಲರೆ?